ಬಹಳ ಹಲೆಯ ಕಾಲದಿಂದ ಬಂದಿರುವುದು. ನಗರದ ವ್ಯಾಪ್ತಿ ಬೆಳೆಯುತ್ತಿದೆ, ಜನಸಂಖ್ಯೆ ಬೆಳೆಯುತ್ತಿದೆ ಮತ್ತು ಜನಗಳ ಆಶೋತ್ತರಗಳು ಬಹಳವಾಗಿ ಬೆಳೆಯುತ್ತಿವೆ. ಅದಕ್ಕೆ ಅನುಗುಣವಾಗಿ ಈ ಕಾನೂನುಗಳನ್ನು ಮಾಡಬೇಕಾಗಿದೆ. ಪರವಾನಿಗೆಯನ್ನು ಕೊಡಕೂಡದು, ಕೊಡಬೇಕೆಂದು ಏನು ಕಾನೂನು ರೆವ್ಯೂ ಮಾಡಿದ್ದಾರೆ, ಅದನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಬಹಳ ಒಳ್ಳೆಯ ಸೂಚನೆ ಇದೆ, ಮುಂದೆ ಬರುವ ಅಬಕಾರಿ ವರ್ಷ ಪ್ರಾರಂಭವಾಗುವ ಮೊದಲು, ಅಧಿಸೂಚನೆಗಳನ್ನು ಕೊಡುವ ಮೊದಲು .....

ಶ್ರೀ ಸಿ. ಬೈರೇಗೌಡ : ಮೊದಲು ಅಂಗಡಿ ಹರಾಜು ಮಾಡುತ್ತಿದ್ದೀರಿ ಈಗ ಅದಕ್ಕೆ ಬದಲಾಗಿ ಷಾಪ್ಟೈಸ್ ಇದ್ದದ್ದು ಏರಿಯಾ ಎಂದು ಫಿಕ್ಸ್‌ಡಿದ್ದೀರಿ. ಆ ಏರಿಯಾದಲ್ಲಿ ಯಾರು ಬೇಕಾದರೂ ಎಷ್ಟು ಬೇಕಾದರೂ ಸಾರಾಯಿ ಮಾರಾಟ ಮಾಡಬಹುದು. ಸ್ವಲ್ಪ ದಯವಿಟ್ಟು ಅದನ್ನು ಗಮನದಲ್ಲಿಟ್ಟುಕೊಂಡು ತಾವು ಉತ್ತರವನ್ನು ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದನ್ನು ಮುಂಬುವ ದಿವಸಗಳಲ್ಲಿ ಪುನಃ ಪರಿಶೀಲನೆ ಮಾಡಿ ಎಲ್ಲೆಲ್ಲಿ ಷಾಪ್ ಇರಬಾರದು ಇದರ ಬಗ್ಗೆ ತಮ್ಮ ಜೊತೆಯಲ್ಲಿ ನಮ್ಮ ಬೆಂಗಳೂರು ನಗರದ ಶಾಸಕರನ್ನು ಕೂಡ ಕರೆಯಿಸಿ ಸಮಾಲೋಚನೆಗಳನ್ನು ಮಾಡಿ ನಮ್ಮ ಎಕ್ಸೈಸ್ ಕಮೀಷನರ್‌ನ್ನು ಕೂರಿಸಿ ಎಲ್ಲೆಲ್ಲಿ ಅದನ್ನು ಸಂಪೂರ್ಣ ಹತೋಟಿ ತರಬೇಕು ನಿಲ್ಲಿಸಬೇಕು ಎಂಬ ರೀತಿಯಲ್ಲಿ ನಾವು ವ್ಯಾಪಕವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಬೆಂಗಳೂರು ಮೈಸೂರು ನಡುವೆ ಪ್ರಯಾಣಿಕರಿಗೆ ಸೌಲಭ್ಯ

112 - ಶ್ರೀ ಚಿಕ್ಕಮಾಧು (ಹುಣಸೂರು) : ಮಾನ್ಯ ಸಾರಿಗೆ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಎರಡು ಪ್ರಮುಖ ನಗರಗಳಾದ ಮೈಸೂರು ಬೆಂಗಳೂರು ನಡುವೆ ಪ್ರತಿನಿತ್ಯ ಓಡಾಡುತ್ತಿರುವ ಸಾರಿಗೆ ಸಂಸ್ಥೆ ಬಸ್ಸುಗಳೆಷ್ಟು ಅದರಲ್ಲಿ ಸಾಮಾನ್ಯ ಶೀಘ್ರ, ತಡೆರಹಿತ ಬಸ್ಸುಗಳ ಸಂಖ್ಯೆಗಳೇನು?*

ಆ) *ಈ ಎರಡು ಪ್ರಮುಖ ನಗರಗಳ ನಡುವೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಿರುವ ಲಕ್ಷಾಂತರ ಪ್ರಯಾಣಿಕರುಗಳಿಗೆ ಮಾರ್ಗ ಮಧ್ಯದಲ್ಲಿ ಕುಡಿಯುವ ನೀರು, ಫಲಹಾರ, ಶೌಚಾಲಯ ಇನ್ನಿತರೆ ಯಾವುದೇ ರೀತಿಯ ವ್ಯವಸ್ಥೆ ಇಲ್ಲದೆ ಪ್ರಯಾಣಿಕರುಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಸಾರಿಗೆ ಸಂಸ್ಥೆಯು ಮೇಲ್ಕಂಡ ಯಾವುದೇ ರೀತಿಯ ವ್ಯವಸ್ಥೆ ಮಾಡದಿರುವುದು ಈ ಎರಡು ನಗರಗಳ ಮಾರ್ಗದ ಅಜು ಬಾಜುವಿನಲ್ಲಿ ಖಾಸಗಿಯವರು ಹಲವಾರು, ಅನಾರೋಗ್ಯ, ಅಶುಚಿತ ಆಶಿಸ್ತಿನ ಫಲಹಾರ ಮಂದಿರಗಳನ್ನು ತೆರೆದಿದ್ದು, ಸಾರಿಗೆ ಸಂಸ್ಥೆಯ ಪ್ರತಿಯೊಂದು ಬಸ್ಸು ಒಂದಲ್ಲ ಒಂದು ಈ ರೀತಿಯ ಫಲಹಾರ ಮಂದಿರಗಳ ಮುಂದೆ ನಿಂತು ಪ್ರಯಾಣಿಕರು ವಿಧಿಯಿಲ್ಲದೆ ಇಂತಹ ಅವ್ಯವಸ್ಥೆಯ ಫಲಹಾರ ಮಂದಿರಗಳಲ್ಲಿ ತಿಂಡಿ ತಿನಿಸು ತಿಂದು ತೊಂದರೆ ಪಡುತ್ತಿರುವುದಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಬಂದಿದ್ದರೆ ಈ ಬಗ್ಗೆ ಲಕ್ಷಾಂತರ ಪ್ರಯಾಣಿಕರ ಅನುಕೂಲಕ್ಕಾಗಿ ಇದುವರೆಗೆ ಕೈಗೊಂಡಿರುವ ಕ್ರಮಗಳೇನು ಹಾಗೂ ಈ ರೀತಿಯ ಕ್ರಮಗಳಿಂದ ಪ್ರಯಾಣಿಕರ ತೊಂದರೆಗಳು ಬಗೆ ಹರಿದಿವೆಯೇ?*

ಉ) ಬಗೆಹರಿಯದಿದ್ದಲ್ಲಿ ಇನ್ನು ಮುಂದಾದರೂ ಸಾರಿಗೆ ಸಂಸ್ಥೆಯವರು ಯಾವ ಯಾವ ರೀತಿಯ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಿರುವರು (ವಿವರಗಳನ್ನು ನೀಡುವುದು)

ಊ) ಈ ರೀತಿಯ ಸಾರಿಗೆ ಸಂಸ್ಥೆಯವರು ಪ್ರಯಾಣಿಕರ ಅನುಕೂಲಕ್ಕಾಗಿ ವ್ಯವಸ್ಥಿತ ಪರಿಹಾರವನ್ನು ದೊರಕಿಸಲು ಈಗಲಾದರೂ ತೀವ್ರ ರೀತಿಯ ಕ್ರಮ ಕೈಗೊಳ್ಳುವರೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಒಟ್ಟು 181 ಬಸ್ಸುಗಳು. ಇದರಲ್ಲಿ 68 ಬಸ್ಸುಗಳು ತಡೆರಹಿತವಾಗಿ, 67 ಬಸ್ಸು ವೇಗದೂತವಾಗಿ, 26 ಬಸ್ಸುಗಳು ಅರೆ ಸುಖಾಸೀನ ಮತ್ತು 20 ಸುಖಾಸೀನ ಬಸ್ಸುಗಳು.

ಆ) ಇಲ್ಲ

ಇ) ಹೌದು.

ಈ) ಕ.ರಾ.ರ.ಸಾ. ಸಂಸ್ಥೆಯ ರಾಮನಗರ, ಮದ್ದೂರು ಮತ್ತು ಮಂಡ್ಯ ಬಸ್ ನಿಲ್ದಾಣಗಳಲ್ಲಿ ಆಧುನಿಕ ಬಸ್ ನಿಲ್ದಾಣಗಳ ಸೌಲಭ್ಯಗಳಾದ ಕುಡಿಯುವ ನೀರು, ಫಲಹಾರ ಮಂದಿರ, ಶೌಚಾಲಯ ಇತ್ಯಾದಿಗಳನ್ನು ಪ್ರಯಾಣಿಕರ ಅನುಕೂಲಕ್ಕಾಗಿ ಒದಗಿಸಲಾಗಿದೆ. ಅನಧಿಕೃತ ನಿಲುಗಡೆ ನೀಡುವ ಸಿಬ್ಬಂದಿಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗುತ್ತಿದೆ.

ಉ)

ಉದ್ಭವಿಸುವುದಿಲ್ಲ

ಊ)

ಉದ್ಭವಿಸುವುದಿಲ್ಲ

ಶ್ರೀ ಚಿಕ್ಕಮಾಧು : ಸನ್ಮಾನ್ಯ ಅಧ್ಯಕ್ಷರೇ, ಮೈಸೂರು ಮತ್ತು ಬೆಂಗಳೂರು ನಗರದಿಂದ 185-186 ಬಸ್ಸುಗಳು ಸಂಚರಿಸುತ್ತವೆಂದು ಹೇಳಿದ್ದಾರೆ, ಅದರಲ್ಲಿ ಸಾವಿರಾರು ಜನ ಪ್ರಯಾಣ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಅವರ ಉತ್ತರದಲ್ಲಿ ಈ ತಡೆರಹಿತ ಬಸ್ಸುಗಳಿಗೆ ರಾಮನಗರ, ಮದ್ದೂರು ಮತ್ತು ಮಂಡ್ಯ ಇವುಗಳ ನಡುವೆ ನಿಲುಗಡೆಗೆ ಅವಕಾಶ ಮಾಡಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅವರು ಹೇಳಿದ ರೀತಿಯಲ್ಲಿ ಯಾವುದೇ ಚಾಲಕರು ಕೂಡ ಆ ಜಾಗದಲ್ಲಿ ಬಸ್ಸುಗಳನ್ನು ನಿಲ್ಲಿಸುವುದಿಲ್ಲ. ಚಾಲಕರು ಮತ್ತು ನಿರ್ವಾಹಕರು ತಮ್ಮ ಸ್ವಇಚ್ಛೆಯಿಂದ ತಮಗೆ ಅನುಕೂಲ ಆಗುವ ಜಾಗದಲ್ಲಿ ಮೈಸೂರು ಮತ್ತು ಬೆಂಗಳೂರು ನಗರದ ಮಧ್ಯೆ ಬರತಕ್ಕಂಥ ಆಜುಬಾಜುವಿನಲ್ಲಿ ಇಟ್ಟಿರತಕ್ಕಂಥ ಸ್ವಚ್ಛತೆ ಇಲ್ಲದೇ ಇರತಕ್ಕಂತಹ ಹೋಟೆಲುಗಳ ಮುಂದೆ ನಿಲ್ಲಿಸುತ್ತಾರೆ. ಈ ವ್ಯವಸ್ಥೆಯ ಬಗ್ಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹೆಚ್ಚಿಗೆ ಗಮನಕೊಡಬೇಕೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ತಾವು ಬಸ್ಸುಗಳನ್ನು ಓಡಿಸತಕ್ಕಂಥದ್ದು ಪ್ರಯಾಣಿಕರ ಅನುಕೂಲಕ್ಕಾಗಿಯೇ ವಿನಹ ಚಾಲಕರು ಮತ್ತು ನಿರ್ವಾಹಕರ ಅನುಕೂಲಕ್ಕಲ್ಲ. ಆಜುಬಾಜುವಿನಲ್ಲಿ ಬಸ್ಸು ನಿಲುಗಡೆ ಮಾಡಿದಾಗ ವಿಶೇಷವಾಗಿ ಮಹಿಳೆಯರಿಗೆ ಯಾವುದೇ ಒಂದು ಶೌಚಾಲಯದ ವ್ಯವಸ್ಥೆ ಅಲ್ಲಿ ಇಲ್ಲದೇ ಇರುವುದರಿಂದ ಬಹಳ ಶೋಚನೀಯವಾದ ಒಂದು ಪರಿಸ್ಥಿತಿ ಹೆಣ್ಣುಮಕ್ಕಳಿಗೆ ಮತ್ತು ತಾಯಂದಿರಿಗೆ ಆಗುತ್ತದೆ. ಈ ಪರಿಸ್ಥಿತಿಯನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ನಾನು ದಿನನಿತ್ಯ ಬೆಂಗಳೂರಿಗೆ ಬಸ್ಸಿನಲ್ಲಿ ಪ್ರಯಾಣ ಮಾಡುವುದರಿಂದ ಈ ನೋವನ್ನು ನಾನು ನೋಡುತ್ತಿದ್ದೇನೆ. ಅದಕ್ಕೆ ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಕರಾರುವಾಕ್ಕಾಗಿ ತಾವು ಎಲ್ಲಿ ಬಸ್ಸುಗಳನ್ನು ನಿಲ್ಲಿಸುವುದಕ್ಕೆ ವ್ಯವಸ್ಥೆ

ಮಾಡಿದ್ದೀರಿ, ಅಂತಹ ಕಡೆ ಬಸ್ಸುಗಳನ್ನು ನಿಲ್ಲಿಸುವಂತೆ ತಮ್ಮ ಸಿಬ್ಬಂದಿಗಳಿಗೆ ಸೂಚನೆ ನೀಡಬೇಕು. ಮತ್ತು ಅಲ್ಲಿ ಶೌಚಾಲಯದ ವ್ಯವಸ್ಥೆ ಮಾಡಿ ಶುಚಿಯಾದ ಫಲಹಾರ ಮಂದಿರವನ್ನು ಕೂಡ ವ್ಯವಸ್ಥೆ ಮಾಡತಕ್ಕಂಥ ಕ್ರಮವನ್ನು ಕೈಗೊಳ್ಳಬೇಕು.

ಈಗ ರಸ್ತೆಯ ಮಧ್ಯದಲ್ಲಿ ಬಸ್ಸನ್ನು ನಿಲ್ಲಿಸುತ್ತಿದ್ದಾರೆ. ಬಸ್ ನಿಲ್ದಾಣಕ್ಕೆ ಯಾರೂ ಹೋಗುವುದಿಲ್ಲ. ಅವರು ತಮ್ಮ ಸ್ವಇಚ್ಛೆಯಂತೆ ರಸ್ತೆಯ ಮಧ್ಯದಲ್ಲಿ ನಿಲ್ಲಿಸುತ್ತಿರುವುದನ್ನು ತಪ್ಪಿಸಬೇಕು. ಅನೇಕ ಪ್ರಯಾಣಿಕರು ಅಡ್ಡ ಬರತಕ್ಕ ಬಸ್ಸುಗಳನ್ನು ಗಮನಿಸದೆ ಬಸ್ ಹತ್ತುವಲ್ಲಿ ಪ್ರಯತ್ನ ಮಾಡುತ್ತಾರೆ. ಅಂಥ ಸಂದರ್ಭದಲ್ಲಿ ಅನೇಕ ಅಪಘಾತಗಳಿಗೆ ಒಳಗಾಗುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಮೈಸೂರು ಮತ್ತು ಬೆಂಗಳೂರು ಮಧ್ಯದಲ್ಲಿ ವ್ಯವಸ್ಥಿತವಾದ ಬಸ್ ನಿಲ್ದಾಣಗಳನ್ನು ಹಾಗೂ ಸರಿಯಾದ ಶೌಚಾಲಯ ಮತ್ತು ಫಲಹಾರ ಮಂದಿರದ ವ್ಯವಸ್ಥೆಯನ್ನೂ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೋರುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೇ, ಮೈಸೂರು-ಬೆಂಗಳೂರಿಗೆ 181 ಬಸ್ಸುಗಳು ಓಡಾಡುತ್ತಿದ್ದು, ಅವುಗಳಲ್ಲಿ 68 ತಡೆರಹಿತ ಬಸ್ಸುಗಳು, 67 ವೇಗಧೂತ ಬಸ್ಸುಗಳು, 26 ಅರೆ ಸುಖಾಸೀನ ಬಸ್ಸುಗಳು ಮತ್ತು 20 ಸುಖಾಸೀನ ಬಸ್ಸುಗಳು. ರಾಮನಗರ, ಮದ್ದೂರು ಮಂಡ್ಯ ಈ ಮೂರು ಸ್ಥಳಗಳಲ್ಲಿ ನಮ್ಮ ಬಸ್ಸ್ಟಾಂಡ್ ಇದೆ. ಇದರ ಜೊತೆಗೆ ಮಹಿಳೆಯರ ಮತ್ತು ಪುರುಷರ ಶೌಚಾಲಯಗಳು, ಕುಡಿಯುವ ನೀರಿನ ವ್ಯವಸ್ಥೆ, ಫಲಹಾರ ಮಂದಿರಗಳು, ಪುಸ್ತಕ ಮಳಿಗೆ ಈ ಎಲ್ಲಾ ವ್ಯವಸ್ಥೆಯನ್ನು ಒದಗಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಮದ್ದೂರು ಎನ್ನತಕ್ಕಂಥ ಊರು ಇಲ್ಲ ನೀವು ಇವುಗಳನ್ನೆಲ್ಲಾ ಎಲ್ಲಿ ಮಾಡಿದ್ದೀರೋ ನಮಗಂತೂ ಗೊತ್ತಿಲ್ಲ.

ಶ್ರೀ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೇ, ಶ್ರೀರಂಗಪಟ್ಟಣ ಮತ್ತು ಚನ್ನಪಟ್ಟಣದಲ್ಲಿ ಟೆಂಪೊರರಿಯಾಗಿ ಮಾಡಿದ್ದೇವೆ. ಮಾನ್ಯ ಸದಸ್ಯರ ಕಂಪ್ಲೆಂಟ್ ಏನು ಇದೆ ಎಂದರೆ ಬಸ್ ಡ್ರೈವರ್ಗಳು ಬಸ್ಸುಗಳನ್ನು ಬಸ್ ನಿಲ್ದಾಣದಲ್ಲಿ ನಿಲ್ಲಿಸುವುದಕ್ಕೆ ಬದಲಾಗಿ ಬೇರೆ ಕಡೆಗಳಲ್ಲಿ ತಮ್ಮ ಸ್ವಾರ್ಥಕ್ಕಾಗಿ ನಿಲ್ಲಿಸುತ್ತಿದ್ದಾರೆ ಎಂದು, ಅವರು ಖಾಸಗೀ ಹೋಟೆಲ್ಗಳ ಮುಂದೆ ಬಸ್ಸುಗಳನ್ನು ನಿಲ್ಲಿಸುತ್ತಾರೆ ಎಂಬ ಕಂಪ್ಲೆಂಟ್ ಬಂದನಂತರ ನಾವು ಆಕ್ಷನ್ ತೆಗೆದುಕೊಂಡಿದ್ದೇವೆ. 250 ಡ್ರೈವರುಗಳಲ್ಲಿ ನಾವು ಪೆನಾಲ್ಟಿ ಎಂದು 50 ರೂಪಾಯಿಗಳಿಂದ 200 ರೂಪಾಯಿಗಳ ವರೆಗೆ ವಸೂಲಿ ಮಾಡಿದ್ದೇವೆ. ಯಾರು ಬಸ್ಸನ್ನು ಬಸ್ಟಾಂಡಿನಲ್ಲಿ ನಿಲ್ಲಿಸದೆ ಬೇರೆ ಸ್ಥಳದಲ್ಲಿ ಅಂದರೆ ಪ್ರೈವೇಟ್ ಹೋಟೆಲ್ಗಳ ಮುಂದೆ ನಿಲ್ಲಿಸುತ್ತಾರೆ ಅವರ ವಿರುದ್ಧ ಆಕ್ಷನ್ ತೆಗೆದುಕೊಂಡಿದ್ದೇವೆ. ನಾವು ಏನು ಅವರಿಗೆ ಪೆನಾಲ್ಟಿ ಹಾಕಿದ್ದೇವೆ ಆ ಹಣವನ್ನು ಅವರು ಹೋಟೆಲ್ನವರ ಕಡೆಯಿಂದ ವಸೂಲು ಮಾಡಿಕೊಳ್ಳುತ್ತಿದ್ದಾರೆ. ಇದು ನಮಗೆ ಗೊತ್ತಾಗಿದೆ. ಆ ದೃಷ್ಟಿಯಿಂದ ನಾವು ಯಾರು ಈ ರೀತಿ ಇಲ್ಲೀಗಲ್ ಆಗಿ ಮಾಡುತ್ತಿದ್ದಾರೆ, ಅಂದರೆ ಬಸ್ ಸ್ಟಾಂಡ್ನಲ್ಲಿ ಬಸ್ ನಿಲ್ಲಿಸದೆ ಬೇರೆ ಪ್ರೈವೇಟ್ ಹೋಟೆಲ್ ಬಳಿ ನಿಲ್ಲಿಸುತ್ತಾರೆ ಅವರ ವಿರುದ್ಧ ಸಸ್ಪನ್ಷನ್ ಅಥವಾ ಪ್ರಸಂಗ ಬಂದರೆ ಡಿಸ್ಮಿಸ್ ಮಾಡುವ ಕ್ರಮವನ್ನೂ ಸಹ ಕೈಗೊಳ್ಳುತ್ತೇವೆ. So, we are taking action as per rules.

ಮಲೆನಾಡು ಅಭಿವೃದ್ಧಿ ಕಾಮಗಾರಿ

20 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯವರು, ಲೋಕೋಪಯೋಗಿ ಇಲಾಖೆಯ ಕೆಲಸಗಳಿಗೆ ಮಂಜೂರಾತಿ ನೀಡಿದ್ದು ಲೆಕ್ಕ ಪತ್ರ ನಿರ್ವಹಣೆಯಲ್ಲಿ ಕಾನೂನಿನ